ವರದಿಗಳನ್ನೊಪ್ಪಿಸುವುದು

ಶ್ರೀ ಬಿ. ಆರ್. ಯಾವಗಲ್ (ಉಪಾಧ್ಯಕ್ಷರು).—ಮಾನ್ಯ ಅಧ್ಯಕ್ಷರೇ ಖಾಸಗೀ ಸದಸ್ಯರ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ ಐದನೆಯ ವರದಿಯನ್ನೊಪ್ಪಿಸುತ್ತೇನೆ.

ಶ್ರೀ ಕೆ. ಜಿ. ರಾಮಸ್ವಾಮಿ.—ಮಾನ್ಯ ಅಧ್ಯಕ್ಷರೇ ಸದನವು ಈ ವರದಿಯನ್ನು ಒಪ್ಪುತ್ತದೆಂದು ಸೂಚಿಸುತ್ತೇನೆ.

ಶ್ರೀ ಎಸ್. ಎಸ್. ಕಡಪಟ್ಟಿ (ಅಧ್ಯಕ್ಷರು, ಅಂದಾಜು ಸಮಿತಿ).—ಮಾನ್ಯ ಅಧ್ಯಕ್ಷರೇ ಅಂದಾಜುಗಳ ಸಮಿತಿಯ ಈ ಕೆಳಕಂಡ ವರದಿಗಳನ್ನೊಪ್ಪಿಸುತ್ತೇನೆ.

ಅ) ಆರನೆಯ ವಿಧಾನ ಸಭೆಯ ಸಮಿತಿಯವರು ವೀನಸುಗಾರಿಕೆ ಹಾಗೂ ತೋಟಗಾರಿಕೆ ಇಲಾಖೆಯ ಮೇಲೆ ಸಲ್ಲಿಸಿದ್ದ ಐದನೆಯ ವರದಿಯಲ್ಲಿನ ಶಿಫಾರಸ್ಸುಗಳ ಮೇಲೆ ಸರ್ಕಾರದವರು ತೆಗೆದುಕೊಂಡಿರುವ ಕ್ರಮದ ಬಗ್ಗೆ ಎಂಟನೆಯ ವಿಧಾನ ಸಭೆಯ ಅಂದಾಜು ಸಮಿತಿಯವರು ಸಲ್ಲಿಸುತ್ತಿರುವ ಐದನೆಯ ಮತ್ತು ಆರನೇ ವರದಿ, ಹಾಗೂ

ಆ) ಏಳನೆಯ ವಿಧಾನ ಸಭೆಯ ಅಂದಾಜು ಸಮಿತಿಯವರು ಘಟಪ್ರಭಾ ಮತ್ತು ಮಲಪ್ರಭಾ ನೀರಾವರಿ ಯೋಜನೆಗಳಿಗೆ ಸಂಬಂಧಿಸಿದಂತೆ ಸಲ್ಲಿಸಿರುವ ಮೊದಲನೆಯ ವರದಿಯ ಶಿಫಾರಸ್ಸುಗಳ ಮೇಲೆ ಸರ್ಕಾರದವರು ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಏಳನೆಯ ವರದಿಯನ್ನು ಒಪ್ಪಿಸುತ್ತೇನೆ.

ಅಧ್ಯಕ್ಷರು.—ವರದಿಯನ್ನು ಒಪ್ಪಿಸಲಾಯಿತು.

೧೦-೦೦ ಎ. ಎಂ.

ಪ್ರಕಟಣೆ

ಅಧ್ಯಕ್ಷರು.—ಭಾರತ ದಂಡಪ್ರಕ್ರಿಯೆ ಸಂಹಿತೆಯ ೧೪೫, ೩೪೦ ೧೮೬ನೇ ಕಲಮುಗಳ ಮೇರೆಗೆ ವಿಧಾನ ಸಭಾ ಸದಸ್ಯರಾದ ಶ್ರೀ ಪಂಪಾಪತಿಯವರನ್ನು ದಾವಣಗೆರೆಯಲ್ಲಿ ದಿನಾಂಕ ೨೮-೧-೧೯೮೮ ರಂದು ಬೆಳಿಗ್ಗೆ ೧೧-೩೦ ಗಂಟೆಗೆ ಬಂಧಿಸಲಾಯಿತು. ಮಾನ್ಯ ಸದಸ್ಯರು ಜಾಮೀನಿನ ಮೇಲೆ ಬಿಡುಗಡೆ ಹೊಂದಲು ನಿರಾಕರಿಸಿದ್ದರಿಂದ ಅವರನ್ನು ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ಮುಂದೆ ಹಾಜರು ಪಡಿಸಲಾಗುವುದೆಂದೂ ಹಾಗೂ ಆ ಬಗ್ಗೆ ಪ್ರಗತಿಯನ್ನು ತಿಳಿಸಲಾಗುವುದೆಂದು ಪೋಲೀಸ್ ಸರ್ಕಲ್ ಇನ್ಸ್‌ಪೆಕ್ಟರ್, ದಾವಣಗೆರೆ ಅವರಿಂದ ಸಂದೇಶ ಬಂದಿದೆ.

ಗಮನ ಸೆಳೆಯುವ ಸೂಚನೆ

ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಅಧ್ಯಕ್ಷರೆ, ಜಿಲ್ಲಾ ಘಟ್ಟದ ಶಿಕ್ಷಕರ ನೇಮಕಾತಿ ಸಮಿತಿಗಳು ಕೆಲಸ ಮಾಡದೇ ಇರುವುದರಿಂದ ಟಿ.ಸಿ.ಹೆಚ್. ತರಬೇತಿ ಪಡೆದ ನಿರುದ್ಯೋಗಿಗಳಿಗೆ ಉಂಟಾಗಿರುವ ತೊಂದರೆಯ ಬಗ್ಗೆ ಪ್ರಾಥಮಿಕ ಹಾಗೂ ಸೆಕೆಂಡರಿ ಶಿಕ್ಷಣದ ರಾಜ್ಯ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಅಧ್ಯಕ್ಷರು.—ಅವರ ಪರವಾಗಿ ಯಾರಾದರೂ ಉತ್ತರಿಸುತ್ತೀರಾ ?

ಪ್ರೊ ಎ. ಲಕ್ಷ್ಮೀಸಾಗರ್.—ಇನ್ನೊಂದು ದಿನ ತೆಗೆದುಕೊಳ್ಳಿ. ಈಗ ಮಂತ್ರಿಗಳು ಇಲ್ಲ.

ಅಧ್ಯಕ್ಷರು.—ಆಯಿತು.

ಶ್ರೀ ಎಂ. ಎಸ್. ಕೃಷ್ಣನ್.—ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲವೆಂದರೆ ಏನು ? ಏತಕ್ಕೆ ನಾವು ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಬೇಕು ?

ಅಧ್ಯಕ್ಷರು.—ಸಂಬಂಧಪಟ್ಟ ಮಂತ್ರಿಗಳು ಇಲ್ಲವೆಂದು ಹೇಳುತ್ತಿದ್ದಾರೆ.